# ಮೂಲಾಂಶಗಳು

| | |
|---|---|
| ಪದವಿ | ಬಿ.ಎ. |
| ವಿಷಯ | ಕನ್ನಡ ಐಚ್ಛಿಕ |
| ಚಾತುರ್ಮಾಸ | III |
| ವಿಶ್ವವಿದ್ಯಾಲಯ | ಕುವೆಂಪು ವಿಶ್ವವಿದ್ಯಾಲಯ |
| ಸೆಷನ್ | 1 |

# ಅಧ್ಯಾಯ -೧

# ಸೊಲ್ಲರಿಮೆ: ಭಾಷೆ-ಸಂಸ್ಕೃತಿ-ಸಾಹಿತ್ಯ ಸಂಬಂಧ

# ಸೊಲ್ಲರಿಮೆಯ ಪರಿಚಯ
# ಮತ್ತು
# ಪದ್ಯ ಪರಿಚಯ

- ಮನುಷ್ಯನನ್ನು ಪ್ರಾಣಿಯಿಂದ ಪ್ರತ್ಯೇಕಿಸಿ 'ಬುದ್ಧಿ ಜೀವಿ' ಎಂಬ ವಿಶೇಷಣದ ಮೂಲಕ ಗುರುತಿಸಲು ಕಾರಣವಾದದ್ದು ಮಾತು.
- ಈ ಮಾತು ನಮ್ಮ ಅಪಾರ ತಿಳುವಳಿಕೆಯ ಭಾಗವಾಗಿದೆ.

- ಈ ತಿಳುವಳಿಕೆಯು ನಡೆ-ನುಡಿ ಎಂಬ ಎರಡು ಆಯಾಮಗಳಲ್ಲಿ ಚಲಾವಣೆಗೊಳ್ಳುತ್ತಿರುವುದನ್ನು ಗಮನಿಸಿದರೆ ನಿತ್ಯ ಜೀವನದಲ್ಲಿ ಭಾಷೆಯ ಸ್ಥಾನವೇನೆಂಬುದರ ಅರಿವಾಗುತ್ತದೆ
- 'ನುಡಿ'ಯು ಬರಹ, ಆಲೋಚನೆ, ಚಿಂತನೆ, ವಿವಿಧ ಮಾನಸಿಕ ಭಾವ ನಿರೂಪಣೆಯ ಸಾಧನವಾಗಿದೆ.

- 'ನಡೆ'ಯು ನಾವು ಬದುಕುತ್ತಿರುವ ನಮ್ಮ ಸುತ್ತಣ ಪರಿಸರದೊಂದಿಗೆ ನಮಗಿರಬೇಕಾದ ಸಂಬಂಧ, ವರ್ತನೆ, ಮಾತು-ಕೃತಿಯ ಮೇಲೆ ಅವಲಂಬಿತವಾಗಿದೆ.
- ವಚನಕಾರ ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು'ಎಂಬ ಪ್ರಸಿದ್ಧ ವಚನ ನಡೆ-ನುಡಿ ಸಿದ್ಧಾಂತದ ತಾತ್ವಿಕ ಆಯಾಮವನ್ನು ಸ್ಪಷ್ಟಪಡಿಸುತ್ತದೆ.

- ಮುತ್ತಿನ ಹಾರದಲ್ಲಿ ಮುತ್ತುಗಳು ಹೇಗೆ ಒತ್ತೊತ್ತಾಗಿ ಸುಂದರವಾಗಿ ಶೋಭಿಸುತ್ತವೆಯೊ ಹಾಗೆಯೇ ನಮ್ಮ ನುಡಿ ಪರಸ್ಪರ ಪೂರಕ ವಿಚಾರಗಳಿಂದ ಸೊಲ್ಲರಿಮೆಯ ನಿಯಮಕ್ಕೆ ಬದ್ಧವಾಗಿರಬೇಕು.
  - ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು- ಮಾಣಿಕ್ಯವು ಬೆಳಕು ನೀಡಬೇಕಾದರೆ ತನ್ನದೇ ಆದ ಸುಸಂಬದ್ಧ ಸಂರಚನೆಯನ್ನು ಹೊಂದಿರಬೇಕಾಗುತ್ತದೆ.

- ಅಂತೆಯೇ ನಮ್ಮ ಮಾತು ಕೂಡ ಅರ್ಥಪೂರ್ಣ ಪದಗಳ ರಚನೆಯಿಂದ ನಿರ್ದಿಷ್ಟ ಅರ್ಥದ ಬೆಳಕನ್ನು ಚೆಲ್ಲುತ್ತಿರುತ್ತದೆ.
- ಮಾತು ಸ್ಪಟಿಕದ ಸಲಾಕೆಯಂತಿರಬೇಕು-ಸಲಾಕೆ ಅಥವಾ ಕಿರಣವು ದೀಪ್ತಿಗಿಂತ ಹೆಚ್ಚು ವ್ಯಾಪ್ತವೂ ತೀಕ್ಷ್ಣವೂ ಆದ ಪರಿಣಾಮವನ್ನುಂಟು ಮಾಡುವಂತದ್ದು.
- ಮುತ್ತಿನ ಹಾರ, ಮಾಣಿಕ್ಯದ ದೀಪ್ತಿ, ಸ್ಪಟಿಕದ ಸಲಾಕೆ- ಈ ಮೂರು ಹೋಲಿಕೆಗಳು ಭಾಷಾ ಜ್ಞಾನ, ಸೊಲ್ಲರಿಮೆಯ ನಿಯಮಗಳನ್ನು ವಿವರಿಸುತ್ತವೆ.

- ಮೊದಲನೆಯದು ಶಬ್ದ ಶಾಸ್ತ್ರಕ್ಕೆ ಸಂಬಂದಿಸಿದೆ. ಎರಡನೆಯದು ಅರ್ಥ ವಿಜ್ಞಾನಕ್ಕೆ ಸಂಬಂಧಿಸಿದೆ.
- ಮೂರನೆಯದು ವಾಕ್ಯವಿಜ್ಞಾನದ ತತ್ವವನ್ನು ಪ್ರತಿಪಾದಿಸುತ್ತದೆ.
- ಹೀಗೆ ಮಾತಿನ ಮಹತ್ವವನ್ನು ಬಸವಣ್ಣನವರ ವಚನವೊಂದರ ಮೂಲಕ ಅರ್ಥಪೂರ್ಣವಾಗಿ ನಿರೂಪಿಸಬಹುದು.